**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.950/2019**

ಪಿ.ಡಬ್ಲ್ಯೂ: 2

ಸಿ.ಡಬ್ಲ್ಯೂ: 3

| | |
|---|---|
| ಸಾಕ್ಷಿದಾರರ ಹೆಸರು | : ಮಲ್ಲಿಕಾರ್ಜುನ |
| ತಂದೆಯ ಹೆಸರು: | : ಮಲ್ಲಪ್ಪ ಯಾನೆ ಪಾಪಣ್ಣ |
| ವಯಸ್ಸು | : **63 ವರ್ಷ** |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಹಲಸೂರು ಗ್ರಾಮ |

**ದಿನಾಂಕ: 05-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

1 ನೇ ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಈಗ್ಗೆ ಸುಮಾರು 7-8 ವರ್ಷಗಳ ಹಿಂದೆ ನಾನು ಹಲಸೂರು ಗ್ರಾಮದಲ್ಲಿ ಜಮೀನಿಂದ ಬರುತ್ತಿರುವಾಗ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ: 14-03-2017 ರಂದು 8-00 ರಿಂದ 9-00 ಗಂಟೆಯವರೆಗೆ ಮಂಡರವಳ್ಳಿ ಗ್ರಾಮದ ಸರ್ವೆ ನಂ42/3 ರಲ್ಲಿ ಖಾತೆದಾರರಾದ ಶೋಭ ರವರಿಗೆ ಸೇರಿದ ಮನೆಯಲ್ಲಿ ಪೊಲೀಸರು ಮಹಜರ್ ಮಾಡಿದ್ದು, ಸದರಿ ಮಹಜರ್ ಗೆ ನೀವು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ನಾನು ಅಲ್ಲಿ ಸಹಿ ಮಾಡಿರುವುದಿಲ್ಲ, ರಸ್ತೆಯಲ್ಲಿ ಸಹಿ ಮಾಡಿರುತ್ತೇನೆಂದು ನುಡಿದಿರುತ್ತಾರೆ. ಆ ಸಮಯದಲ್ಲಿ ನಿಮ್ಮ ಸಮಕ್ಷಮ ಎ 1 ಬ್ರಾಂಡ್ ಬೆಸ್ಟ್ ಕ್ವಾಲಿಟಿ ಸೂಪರ್ ಫೈನ್ ರೈಸ್ ಎಂದು ಚೀಲದ ಮೇಲೆ

ಬರೆದಿರುವ 25 ಕೆ ಜಿ ತೂಕ ಇರುವ ಒಟ್ಟು 70 ಚೀಲಗಳನ್ನು ಮತ್ತು 4 ಕೆಜಿ ತೊಗರಿ ಬೆಳೆ ಹಾಗೂ ತೂಕ ಮಾಡುವ ಸತ್ಯಂ ಸ್ಕೆಲ್ ಮಿಷನ್‌ನ್ನು ಸಹ ಪೋಲಿಸರು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಆರೋಪಿತರು ನನಗೆ ಗೊತ್ತಿರುವುದಿಲ್ಲ, ನಿಮಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.**

ಪಾಟೀ ಸವಾಲು ಇಲ್ಲ

**ಮರುವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

**Sd/-**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**